## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

**ಸಿ.ಸಿ. ಸಂಖ್ಯೆಃ** 1216/2023

**ಪಿರ್ಯಾದಿ** ಃ ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್ ಠಾಣೆ,
ಮೂಡಿಗೆರೆ.

**ವಿರುದ್ಧ**

**ಆರೋಪಿತರು**

1. ರಕ್ಷಿತ್.ಎಲ್. ಆರ್. (**ಮೃತಪಟ್ಟಿರುತ್ತಾರೆ.**)
   ಬಿನ್ ರಾಮು,
   ವಯಸ್ಸು ಸುಮಾರು 24 ವರ್ಷ,
   ವಾಸಃ ಲಕ್ಷ್ಮೀಪುರ ಗ್ರಾಮ, ಗೋಣಿಬೀಡು ಹೋಬಳಿ,
   ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

2. ಪೀಟರ್ ಮೋನಿಸ್ ಬಿನ್ ಸವೇರ್ ಮೋನಿಸ್,
   ವಯಸ್ಸು ಸುಮಾರು 64 ವರ್ಷ,
   ವಾಸಃ ಅತ್ತಿಗೆರೆ ಗ್ರಾಮ.
   ಹಾಲಿ ವಾಸಃ ಚಕ್ಕೂಡು ಗ್ರಾಮ, ಬಣಕಲ್ ಹೋಬಳಿ,
   ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

3. ವೆಂಕಟೇಶ್.ಜಿ.ಬಿ ಬಿನ್ ಬೋಬೇಗೌಡ,
   ವಯಸ್ಸು ಸುಮಾರು 58 ವರ್ಷ,
   ವಾಸಃ ಗುಡ್ಡಟ್ಟಿ ಗ್ರಾಮ,
   ಬಣಕಲ್ ಹೋಬಳಿ, ಮೂಡಿಗೆರೆ ತಾಲ್ಲೂಕು,
   ಚಿಕ್ಕಮಗಳೂರು ಜಿಲ್ಲೆ.

## ಆಪಾದನೆಯ ಸಾರಾಂಶ

ನಾನು ಶ್ರೀ ಸಚಿನ್.ಡಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, 2 ಮತ್ತು 3 ನೇ ಆರೋಪಿತರಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ–

**1.** ದಿನಾಂಕಃ 02.07.2022 ರಂದು ರಾತ್ರಿ ಸುಮಾರು 9.30 ರ ಸಮಯದಲ್ಲಿ ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಬಿದರಹಳ್ಳಿ ಗ್ರಾಮದ ಕೆ.ಎಸ್.ಆರ್.ಟಿ.ಸಿ ಡಿಪೋದ ಹತ್ತಿರ, ಎನ್.ಹೆಚ್–73 ಟಾರು ರಸ್ತೆಯ ಮೇಲೆ, ಕೊಟ್ಟಿಗೆಹಾರ ಕಡೆಯಿಂದ ಮೂಡಿಗೆರೆ ಕಡೆಗೆ ಬರುವಂತೆ ರಸ್ತೆಯ ಎಡಭಾಗದಲ್ಲಿ, 2 ನೇ ಆರೋಪಿಯಾದ ನೀವು 3 ನೇ ಆರೋಪಿಗೆ ಸೇರಿದ ವಾಹನ ನೋಂದಣಿ ಸಂಖ್ಯೆಃಕೆಎ–18–ಟಿಬಿ–2393 ನೇ ಜಾನ್ ಧೀರೇ ಟ್ರಾಕ್ಟರ್ ಮತ್ತು ಮರದ ತುಂಡುಗಳನ್ನು ನೋಂದಣಿ ಸಂಖ್ಯಾ ಫಲಕವಿಲ್ಲದ ಟ್ರೇಲರ್ಗೆ ತುಂಬಿಸಿ, ಟ್ರೇಲರ್ ಪಂಚರ್ ಆಗಿದ್ದರಿಂದ, ಯಾವುದೇ ಮುಂಜಾಗ್ರತೆ ಮತ್ತು ಎಚ್ಚರಿಕೆಯ ಸೂಚನಾ ಕ್ರಮಗಳನ್ನು ಕೈಗೊಳ್ಳದೇ ಅಪಾಯಕಾರಿಯಾಗಿ ಸಾರ್ವಜನಿಕ ರಸ್ತೆಗೆ ತೊಂದರೆಯಾಗುವ ರೀತಿಯಲ್ಲಿ ಸಾರ್ವಜನಿಕ ರಸ್ತೆಯಲ್ಲಿ ನಿಲ್ಲಿಸಿರುತ್ತೀರಿ. ಈ ರೀತ್ಯಾ 2 ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 283 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು ಸದರಿ ವಾಹನವನ್ನು ತುಂಬಾ ನಿರ್ಲಕ್ಷತನದಿಂದ ನಿಲ್ಲಿಸಿದ್ದಾಗ, ಮೃತ 1 ನೇ ಆರೋಪಿಯು ತನ್ನ ವಾಹನ ನೋಂದಣಿ ಸಂಖ್ಯೆಃಕೆಎ–18–ಇಜಿ–2544 ನೇ ಹೋಂಡಾ ಶೈನ್ ಬೈಕ್ ಅನ್ನು ಚಾಲನೆ ಮಾಡಿಕೊಂಡು ಬಂದು ಸದರಿ ಟ್ರೇಲರ್ಗೆ ಡಿಕ್ಕಿಪಡಿಸಿದ ಪರಿಣಾಮ ಅಪಘಾತವಾಗಿದ್ದು, ಸದರಿ ಅಪಘಾತದಿಂದಾದ ಗಾಯಗಳಿಂದಾಗಿ 1 ನೇ ಆರೋಪಿಯು ಮೃತಪಟ್ಟಿರುತ್ತಾರೆ. ಈ ರೀತ್ಯಾ 2 ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 304 ಎ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**3**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು 3 ನೇ ಆರೋಪಿಗೆ ಸೇರಿದ ವಿಮೆ ಇಲ್ಲದೇ ಇರುವ ವಾಹನವನ್ನು ಚಾಲನೆ ಮಾಡಿಕೊಂಡು ಬಂದಿರುತ್ತೀರಿ ಹಾಗೂ 3 ನೇ ಆರೋಪಿಯಾದ ನೀವು ವಿಮೆ ಇಲ್ಲದ ವಾಹನವನ್ನು ಚಾಲನೆ ಮಾಡಲು 2 ನೇ ಆರೋಪಿಗೆ ಅನುಮತಿಸಿರುತ್ತೀರಿ. ಈ ರೀತ್ಯಾ 2 ಮತ್ತು 3 ನೇ ಆರೋಪಿಯಾದ ನೀವು ಮೋಟಾರು ವಾಹನ ಕಾಯಿದೆ 196 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**4**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು 3 ನೇ ಆರೋಪಿಗೆ ಸೇರಿದ ನೋಂದಣಿ ಮಾಡಿಸದೇ ಇರುವ ವಾಹನವನ್ನು ಚಾಲನೆ ಮಾಡಿಕೊಂಡು ಬಂದಿರುತ್ತೀರಿ ಹಾಗೂ 3 ನೇ ಆರೋಪಿಯಾದ ನೀವು ನೋಂದಣಿ ಮಾಡಿಸದೇ ಇರುವ ವಾಹನವನ್ನು ಚಾಲನೆ ಮಾಡಲು 2 ನೇ ಆರೋಪಿಗೆ ಅನುಮತಿಸಿರುತ್ತೀರಿ. ಈ ರೀತ್ಯಾ 2 ಮತ್ತು 3 ನೇ ಆರೋಪಿಯಾದ ನೀವು ಮೋಟಾರು ವಾಹನ ಕಾಯಿದೆ ಅಧಿನಿಯಮ 192(1) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

(ದಿನಾಂಕ 05.03.2024 ರಂದು ಆಪಾದನೆಯ ಸಾರಾಂಶವನ್ನು 2 ಮತ್ತು 3 ನೇ ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

**Sd**/-

ಮೂಡಿಗೆರೆ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

**ದಿನಾಂಕಃ** 05.03.2024 **ಜೆ.ಎಂ.ಎಫ್.ಸಿ, ಮೂಡಿಗೆರೆ.**